ದಿನಾಂಕ 30.01.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ- 1 ನೇ ಎದುರುದಾರರ ವಾರಸುದಾರರ ಪರವಾಗಿ ಶ್ರೀ. ಕೆ ಎಂ ಎಸ್ ವಕೀಲರಿಂದ –

1. ರಸ್ತೆಗಾಗಿ ಭೂಸ್ವಾಧೀನ ಆಗಿರುವ ಜಮೀನು ನನಗೆ ಗೊತ್ತು, ಆದರೆ ಅದರ ಸರ್ವೇ ನಂಬರು ಹೇಳಲು ಸಾಧ್ಯವಿಲ್ಲ. ಸಾಕ್ಷಿಯು ಮುಂದುವರೆದು " ಒಂದು ಕಡೆ 34 ಗುಂಟೆ ಮತ್ತು ಇನ್ನೊಂದು ಕಡೆ 29 ಗುಂಟೆ ಜಮೀನು ರಸ್ತೆ ಅಗಲೀಕರಣಕ್ಕಾಗಿ ಹೋಗಿದೆ " ಎಂದು ನುಡಿದಿದ್ದಾರೆ.

2. ಯಾವ ಸ್ಥಳದಲ್ಲಿ 34 ಗುಂಟೆ ಆಸ್ತಿಯನ್ನು ರಸ್ತೆಗಾಗಿ ಭೂಸ್ವಾಧೀನ ಮಾಡಿಕೊಂಡಿದ್ದಾರೆ ಎಂದು ನಾನು ಹೇಳುತ್ತಾ ಇದ್ದೇನೋ ಆ ಸ್ಥಳದಲ್ಲಿ ಅಂದರೆ ಆ ಸರ್ವೇ ನಂಬರಿನಲ್ಲಿ ಆ 34 ಗುಂಟೆ ಭೂಸ್ವಾಧೀನ ಆದ ನಂತರವೂ ಸಹಾ ಇನ್ನೂ 4 ಗುಂಟೆ ವಿಸ್ತೀರ್ಣದ ಜಮೀನು ಉಳಿದಿದೆ ಎಂದರೆ ನನಗೆ ಗೊತ್ತಿಲ್ಲ.

3. ಸದರಿ 34 ಗುಂಟೆ ಮತ್ತು 29 ಗುಂಟೆ ಆಸ್ತಿಗಳನ್ನು ಭೂಸ್ವಾಧೀನ ಮಾಡಿಕೊಳ್ಳುವ ಸಮಯದಲ್ಲಿ ಆ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ನನ್ನ ಗಂಡನ ಅಣ್ಣನಾದ ಸಿದ್ದೇಗೌಡರ ರವರ ಹೆಸರಿನಲ್ಲಿ ಇದ್ದವು ಎಂದರೆ ಸುಳ್ಳು. ಸದರಿ ಆಸ್ತಿಗಳ ಖಾತೆಯನ್ನು ಸಿದ್ದೇಗೌಡರವರ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಲಾಗಿದೆ ಎಂದು ಹೇಳಿ ನಾನಾಗಲೀ ಅಥವಾ ನನ್ನ ಗಂಡನಾಗಲೀ ಅಥವಾ ನನ್ನ ಮಕ್ಕಳಾಗಲೀ ಯಾವುದೇ ಪ್ರಕರಣವನ್ನು ಮಾಡಿರುವುದಿಲ್ಲ ಎಂದರೆ ಆ ಆಸ್ತಿಗಳ ಖಾತೆಗಳು ನನ್ನ ಗಂಡನ ತಂದೆಯಾದ ನಿಂಗೇಗೌಡರ ಹೆಸರಿನಲ್ಲಿಯೇ ಇವೆ. ನನ್ನ ಗಂಡನ ತಂದೆಯನ್ನು ಗೌಡಹಳ್ಳಿ ನಿಂಗೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸರಿ.

4. ನನ್ನ ಮಾವ ನಿಂಗೇಗೌಡರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಸದರಿ ನಿಂಗೇಗೌಡರ ಮೊದಲನೇ ಹೆಂಡತಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ.

5. ನನ್ನ ಗಂಡ ಮತ್ತು ನನ್ನ ಗಂಡನ ತಾಯಿ ಮತ್ತು ನನ್ನ ಗಂಡನ ಅಣ್ಣ ಸಿದ್ದೇಗೌಡ ರವರು ಯಾವ ಇಸವಿಯವರಿಗೆ ಒಟ್ಟಿಗೆ ಇದ್ದರು ಮತ್ತು ಯಾವಾಗ ವಿಭಾಗ ಆದರು ಎಂದರೆ ಅವರುಗಳು ವಿಭಾಗವನ್ನೇ ಮಾಡಿಕೊಂಡಿರಲಿಲ್ಲ.

6. ನನ್ನ ಗಂಡನ ಮತ್ತು ನನ್ನ ಗಂಡನ ಅಣ್ಣನ ವಿರುದ್ಧ ಶ್ರೀರಂಗಪಟ್ಟಣದ ನ್ಯಾಯಾಲಯದಲ್ಲಿ ನಾನು ಆಸ್ತಿಗಳ ವಿಭಾಗಕ್ಕಾಗಿ ಒಂದು ದಾವೆಯನ್ನು ಮಾಡಿದ್ದೆನು ಎಂದರೆ ಸುಳ್ಳು. ನನ್ನ ಗಂಡನ ಅಣ್ಣನಾದ ಸಿದ್ದೇಗೌಡರು ನಮ್ಮ ಮನೆಯ ಯಜಮಾನಿಕೆಯನ್ನು ಮಾಡುತ್ತಿದ್ದರು. ನನ್ನ ಗಂಡನು ನಮಗೆ ಸೇರಿದ ಆಸ್ತಿಯನ್ನು ಓರ್ವ ಅಸಾದುಲ್ಲಾ ಖಾನ್ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂಬುದಾಗಿ ನಾನು ಶ್ರೀರಂಗಪಟ್ಟಣದ ನ್ಯಾಯಾಲಯದಲ್ಲಿ ನಿಲುವು ತೆಗೆದುಕೊಂಡಿದ್ದೆನು ಎಂದರೆ ಸರಿ.

7. ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ನಾನು RSA 580/2024(PAR) ಎಂಬ ಪ್ರಕರಣ ಮಾಡಿದ್ದೇನೆ ಮತ್ತು ಅದು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ.

8. ಬಹಳ ಹಿಂದೆಯೇ ನನ್ನ ಗಂಡ ಮತು ನನ್ನ ಗಂಡನ ತಾಯಿ ಮತ್ತು ನನ್ನ ಗಂಡನ ಅಣ್ಣನಾದ ಸಿದ್ದೇಗೌಡರ ಮಧ್ಯೆ ವಿಭಾಗ ಆಗಿತ್ತು ಮತ್ತು ಆ ವಿಭಾಗದಲ್ಲಿ ಬಂದಂತಹ ಆಸ್ತಿಗಳನ್ನು ನನ್ನ ಗಂಡನು ಐದಾರು ಕ್ರಯಪತ್ರಗಳ ಮೂಲಕ ಬೇರೆ ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ ಮತ್ತು ಆ ಕಾರಣದಿಂದ ನನಗಾಗಲೀ ಮತ್ತು ನನ್ನ ಮಗನಿಗಾಗಲೀ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದು ನ್ಯಾಯಾಲಯವು ತೀರ್ಪು ನೀಡಿದೆ ಎಂದರೆ ಅದೆಲ್ಲಾ ಸುಳ್ಳು.

9. ನಾನು ಹಾಕಿದ ದಾವೆಯಲ್ಲಿ ನನ್ನ ಗಂಡನು ನ್ಯಾಯಾಲಯಕ್ಕೆ ಬರಲಿಲ್ಲ ಎಂದರೆ ನನ್ನ ಗಂಡನಿಗೆ ಪಾರ್ಶ್ವವಾಯು ಆಗಿತ್ತು, ಆ ಕಾರಣದಿಂದ ನನ್ನ ಗಂಡನು ನ್ಯಾಯಾಲಯಕ್ಕೆ ಬರಲಿಲ್ಲ.

10. ನನ್ನ ಮಾವ ನಿಂಗೇಗೌಡರವರಿಗೆ ಇದ್ದಂತಹ ಆಸ್ತಿಗಳ ಮೇಲೆ ನನ್ನ ಗಂಡನಿಗೆ ಅಥವಾ ನನ್ನ ಗಂಡನ ಅಣ್ಣನಿಗೆ ಹಕ್ಕು ಇದೆ ಹೊರತು ಬೇರೆ ಯಾವುದೇ ಮೂರನೇ ವ್ಯಕ್ತಿಗಳಿಗೆ ಆ ಆಸ್ತಿಗಳ ಮೇಲೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ.

11. ನನ್ನ ಗಂಡನಾದ ಅಣ್ಣೇಗೌಡ ಮತ್ತು ನನ್ನ ಗಂಡನ ಅಣ್ಣನಾದ ಸಿದ್ದೇಗೌಡ ರವರಿಗೆ ಸಮಪಾಲು ಬರಬೇಕು ಎಂದು ನಾನು ಈ ಪ್ರಕರಣದಲ್ಲಿ ಕೇಳುತ್ತಾ ಇದ್ದೇನೆ.

12. ನನ್ನ ಗಂಡನ ತಾಯಿಯ ಹೆಸರು ಕೆಂಪಮ್ಮ ಆಗಿದೆ. ಸದರಿ ಕೆಂಪಮ್ಮಳ ತಾಯಿಯ ಹೆಸರು ಚೆನ್ನಮ್ಮ ಆಗಿದೆ, ಆದರೆ ಕೆಂಪಮ್ಮಳ ತಂದೆಯ ಹೆಸರು ನನಗೆ ಗೊತ್ತಿಲ್ಲ.

13. ರಸ್ತೆ ಅಗಲೀಕರಣಕ್ಕಾಗಿ ಭೂಸ್ವಾಧೀನ ಆಯಿತು ಎಂದು ಹೇಳುತ್ತಾ ಇರುವ 29 ಗುಂಟೆ ಆಸ್ತಿಯು ಮೊದಲಿಗೆ ನನ್ನ ಅತ್ತೆಯಾದ ಕೆಂಪಮ್ಮ ರವರ ತಂದೆಗೆ ಸೇರಿದ ಆಸ್ತಿಯಾಗಿತ್ತು

ಮತ್ತು ನನ್ನ ಅತ್ತೆಯ ತಂದೆಯ ಮರಣದ ನಂತರ ಸದರಿ ಆಸ್ತಿಯು ನನ್ನ ಅತ್ತೆಯ ತಾಯಿಯಾದ ಚೆನ್ನಮ್ಮ ರವರ ಹೆಸರಿಗೆ ಬಂತು ಮತ್ತು ಚೆನ್ನಮ್ಮ ರವರ ಮರಣದ ನಂತರ ಆ ಆಸ್ತಿಯು ನನ್ನ ಅತ್ತೆಯಾದ ಕೆಂಪಮ್ಮ ರವರಿಗೆ ಬಂದಿತು ಎಂದರೆ ಸದರಿ ಆಸ್ತಿಯು ನನ್ನ ಗಂಡನ ತಂದೆಯಾದ ನಿಂಗೇಗೌಡರವರ ಆಸ್ತಿಯಾಗಿದೆ.

14. ಮೇಲೆ ಹೇಳಿದಂತಹ 34 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ಕಟ್ಟಬೇಕಾದ ಕಂದಾಯವನ್ನು ಕಟ್ಟಿರಲಿಲ್ಲ ಮತ್ತು ಆ ಕಾರಣದಿಂದ ಆ ಆಸ್ತಿಯನ್ನು "ಬೀಳು" ಎಂದು ಮಾಡಲಾಗಿತ್ತು ಮತ್ತು ನಂತರ ನನ್ನ ಗಂಡನ ತಾಯಿಯಾದ ಕೆಂಪಮ್ಮ ರವರು ಆ ಜಮೀನಿಗೆ ಸಂಬಂಧಿಸಿದ ಕಂದಾಯವನ್ನು ಕಟ್ಟಿದ್ದರು ಮತ್ತು " ಬೀಳು restore “ ಮಾಡಿಸಿಕೊಂಡರು ಎಂದರೆ ಅದೆಲ್ಲಾ ಸುಳ್ಳು.

15. ಬಹಳ ವರುಷಗಳ ಹಿಂದೆ ನಮ್ಮ ಕುಟುಂಬದಲ್ಲಿ ವಿಭಾಗ ಆಗಿದೆ ಮತ್ತು ಆ ವಿಭಾಗದಲ್ಲಿ ಒಂದು ಆಸ್ತಿಯನ್ನು ಅಂದರೆ ಬೀಳು restore ಮೂಲಕ ನಮಗೆ ಮಾಡಿಸಿಕೊಂಡಂತಹ ಆಸ್ತಿಯನ್ನು ನನ್ನ ಅತ್ತೆಯಾದ ಕೆಂಪಮ್ಮ ರವರ ಭಾಗಾಂಶಕ್ಕೆ ಎಂದು ಮತ್ತು ಎಂ. ಶೆಟ್ಟಹಳ್ಳಿ ಗ್ರಾಮದಲ್ಲಿ ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಇದ್ದಂತಹ ಕೆಲವು ಆಸ್ತಿಗಳನ್ನು ನನ್ನ ಗಂಡ ಅಣ್ಣೇಗೌಡ ರವರ ಭಾಗಾಂಶಕ್ಕೆ ಎಂದು ಮತ್ತು ಎಂ. ಶೆಟ್ಟಹಳ್ಳಿ ಮತ್ತು ಸುತ್ತಮುತ್ತ ಇದ್ದಂತಹ ಐದಾರು ಆಸ್ತಿಗಳನ್ನು ನನ್ನ ಗಂಡನ ಅಣ್ಣನಾದ ಸಿದ್ದೇಗೌಡರ ಭಾಗಾಂಶಕ್ಕೆ ಎಂದು ಕೊಡಲಾಗಿದೆ ಎಂದರೆ ಸುಳ್ಳು.

16. ಮೇಲೆ ನನಗೆ ಸೂಚಿಸಿದ ಹಾಗೆ ನಮ್ಮ ಒಟ್ಟು ಕುಟುಂಬದಲ್ಲಿ ವಿಭಾಗ ಆಗಿದೆ ಮತ್ತು ನಂತರ ನನ್ನ ಗಂಡನ ಭಾಗಕ್ಕೆ ಬಂದಂತಹ ಆಸ್ತಿಗಳನ್ನು ನಾನು ಮತ್ತು ನನ್ನ ಗಂಡನು ಸೇರಿಕೊಂಡು 1978 ನೇ ಇಸವಿಯಲ್ಲಿ ಮತ್ತು 1979 ನೇ ಇಸವಿಯಲ್ಲಿ ಮತ್ತು 1984 ನೇ ಇಸವಿಯಲ್ಲಿ ಮತ್ತು 1995 ನೇ ಇಸವಿಯಲ್ಲಿ ಬೇರೆ ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದೇವೆ ಎಂದರೆ ಸುಳ್ಳು. ಕಡೆಯದಾಗಿ 2006 ನೇ ಇಸವಿಯಲ್ಲಿ ನನ್ನ ಗಂಡನು ಓರ್ವ ಅಸಾದುಲ್ಲಾ ಖಾನ್ ಎನ್ನುವವರಿಗೆ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

17. ರಸ್ತೆ ಅಗಲೀಕರಣಕ್ಕಾಗಿ ಭೂಸ್ವಾಧೀನ ಆಗಿರುವ 34 ಗುಂಟೆ ವಿಸ್ತೀರ್ಣದ ಒಂದು ಜಮೀನು ಮತ್ತು 29 ಗುಂಟೆ ವಿಸ್ತೀರ್ಣದ ಇನ್ನೊಂದು ಜಮೀನು ನನ್ನ ಗಂಡನ ತಂದೆಯಾದ ನಿಂಗೇಗೌಡ ರವರಿಗೆ ಸೇರಿದ ಜಮೀನುಗಳು ಆಗಿರಲಿಲ್ಲ ಮತ್ತು ಆಗಿರುವುದಿಲ್ಲ ಮತ್ತು ಆ ಕಾರಣದಿಂದ ಆ ಆಸ್ತಿಗಳ ಮೇಲೆ ಇರತಕ್ಕಂತಹ ಪರಿಹಾರದ ಹಣದಲ್ಲಿ ನನ್ನ ಮಗನಿಗೆ

ಆಗಲೀ ಅಥವಾ ನನಗೆ ಆಗಲೀ ಯಾವುದೇ ಹಕ್ಕು ಅಥವಾ ಭಾಗಾಂಶ ಇರುವುದಿಲ್ಲ ಎಂದರೆ ಸುಳ್ಳು.

18. ನನಗೆ ಯಾವುದೇ ಸ್ವಂತದ ಆದಾಯ ಇರಲಿಲ್ಲ ಎಂದರೆ ಸುಳ್ಳು. ನನ್ನ ಹೆಸರಿನಲ್ಲಿ 1 ಎಕರೆ 10 ಗುಂಟೆ ಜಮೀನು ಒಂದು ಕಡೆ ಮತ್ತು 38 ಗುಂಟೆ ಜಮೀನು ಒಂದು ಕಡೆ ಕೊಂಡುಕೊಂಡಿದ್ದೇನೆ ಎಂದರೆ ಅದನ್ನು ನನ್ನ ತಾಯಿ ಮನೆಯವರು ನನಗೆ ಕೊಟ್ಟಿದ್ದಾರೆ.

19. ಸಾಧ್ಯವಾದರೆ ನನ್ನ ಗಂಡನ ಅಣ್ಣನಾದ ಸಿದ್ದೇಗೌಡ ರವರ ಮಕ್ಕಳಿಗೆ ಬರಬೇಕಾದ ಅಥವಾ ಹೋಗಬೇಕಾದಂತಹ ಪರಿಹಾರದ ಹಣದಲ್ಲಿ ಅಕ್ರಮ ಲಾಭ ಹೊಂದಬೇಕು ಎಂಬ ದುರುದ್ದೇಶದಿಂದ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಮತ್ತು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ** –

20. ಮೇಲೆ ಹೇಳಿದ 34 ಗುಂಟೆ ಮತ್ತು 29 ಗುಂಟೆ ಆಸ್ತಿಗಳ ಖಾತೆಯು ನನ್ನ ಗಂಡನ ತಂದೆಯಾದ ನಿಂಗೇಗೌಡರವರ ಹೆಸರಿನಲ್ಲಿ ಇತ್ತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.